# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 12/15-16

ದಿನಾಂಕ : 25-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶ್ರೀ ಮೋಹನ ಶೆಟ್ಟಿ<br>ಬಿನ್ ತುಕ್ರಪ್ಪ ಶೆಟ್ಟಿ<br>ಮುದ್ದಿಗೆ ಮನೆ,<br>ಹತ್ಯಡ್ಕ ಗ್ರಾಮ, ಬೆಳ್ತಂಗಡಿ ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಎನ್. ಕಿಶೋರ್ ಕೊಳತ್ತಾಯ) | - ಮತ್ತು - | ತಹಶೀಲ್ದಾರರು<br>ಬೆಳ್ತಂಗಡಿ ತಾಲೂಕು ದ.ಕ. |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಬೆಳ್ತಂಗಡಿ ತಾಲೂಕು ಹತ್ಯಡ್ಕ ಗ್ರಾಮದ MR: 18/87-88 ದಿನಾಂಕ: 24/07/87 ರಂತೆ ತಹಶೀಲ್ದಾರರು ಮಾಡಿರುವ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಹತ್ಯಡ್ಕ ಗ್ರಾಮದ ಸ.ನಂ. 184/1 ರ ಪೈಕಿ ವಿಸ್ತೀರ್ಣ 0.28 ಎಕ್ರೆ ಮತ್ತು 184/2 ವಿಸ್ತೀರ್ಣ 0.52 ಎಕ್ರೆ ಜಮೀನುಗಳು ದಿನಾಂಕ: 20-05-1982 ನೇ ಇಸವಿಯಲ್ಲಿ ಬರೆದ ನೋಂದಾಯಿತ ವೀಲುನಾಮೆಯಂತೆ ದಸ್ತಾವೇಜು ನಂಬ್ರ 7/82-83 ಮೇಲ್ಮನವಿದಾರರಿಗೆ ಬಂದಿರುತ್ತದೆ. ಬೆಳ್ತಂಗಡಿ ಕಂದಾಯ ನಿರೀಕ್ಷಕರು MR: 18/87-88 ದಿನಾಂಕ: 24-07-1987 ರಂತೆ ಮಾಡಿದ ಆದೇಶದಲ್ಲಿ ಮೇಲ್ಮನವಿದಾರರ ಹೆಸರನ್ನು ವೀಲುನಾಮೆಯಲ್ಲಿ ಇದ್ದಂತೆ ದಾಖಲಿಸದೆ ಮೋಹನದಾಸ ಬಿನ್ ಸೋಮಪ್ಪ ಶೆಟ್ಟಿ ಎಂದು ದಾಖಲಿಸಿರುತ್ತಾರೆ. ವೀಲುನಾಮೆಯಲ್ಲಿ ಅವರ ಹೆಸರು ಮೋಹನ ಎಂದಿರುತ್ತದೆ. ಹಾಗೂ ತಂದೆಯ ಹೆಸರನ್ನು ದಾಖಲಿಸದೆ ತಾಯಿ ಸುಂದರಿ ಎಂದು ಮಾತ್ರ ದಾಖಲಿಸಿರುತ್ತಾರೆ. ಚುನಾವಣಾ ಗುರುತಿನ ಚೀಟಿಯಲ್ಲಿ ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂದು ದಾಖಲಿರುತ್ತದೆ. ತಿದ್ದುಪಡಿಗಾಗಿ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದಾಗ ಬೆಳ್ತಂಗಡಿ ತಹಶೀಲ್ದಾರರು RRTCR: 245/14-15 ರಂತೆ ಈಗಾಗಲೇ ಮ್ಯುಟೇಶನ್ ಆದೇಶವಾಗಿರುವುದರಿಂದ ಮೇಲ್ಮನವಿ ದಾಖಲಿಸಿ ಪರಿಹಾರ ಪಡಕೊಳ್ಳುವಂತೆ ಹಿಂಬರಹ ನೀಡಿರುವ ಮೇರೆಗೆ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 28-04-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 31-05-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಪ್ರಶ್ನಿತ ಮ್ಯುಟೇಶನ್ ಆದೇಶ

ಮಾಡುವಾಗ ನೋಂದಾಯಿತ ವೀಲುನಾಮೆ ಹಾಗೂ F ಶೆಡ್ಯೂಲ್ ನ್ನು ಸರಿಯಾಗಿ ನೋಡದೆ ಮಾಡಿರುವುದಾಗಿದೆ. ವೀಲುನಾಮೆಯಲ್ಲಿ ಮೋಹನ ಎಂದಿದ್ದರೂ ಮ್ಯುಟೇಶನ್ ಆದೇಶ ಮಾಡುವಾಗ ಮೋಹನದಾಸ ಬಿನ್ ಸೋಮಪ್ಪ ಶೆಟ್ಟಿ ಎಂದು ದಾಖಲಿಸಿರುವುದು ತಪ್ಪು. ಮೇಲ್ಮನವಿದಾರರ ಹೆಸರು ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂದಾಗಬೇಕಾಗಿದೆ. ಅದರಂತೆ ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂದು ಹೆಸರು ತಿದ್ದುಪಡಿಗೊಳಿಸಿ ಸ.ನಂ. 184/1 ವಿಸ್ತೀರ್ಣ 0.28 ಎಕ್ರೆ ಮತ್ತು 184/2 ವಿಸ್ತೀರ್ಣ 0.52 ಎಕ್ರೆ ಜಮೀನುಗಳನ್ನು ಅವರ ಹೆಸರಲ್ಲಿ ಖಾತೆ ದಾಖಲಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ಹೆಸರು ಮ್ಯುಟೇಶನ್ ಆದೇಶದ ಸಮಯ ತಪಾವತು ಆಗಿರುವುದು ಕಂಡು ಬರುತ್ತದೆ. ಕಡತದಲ್ಲಿ ಹಾಜರುಪಡಿಸಲಾದ ನೋಂದಾಯಿತ ವೀಲುನಾಮೆ ಹಾಗೂ ಚುನಾವಣಾ ಗುರುತು ಚೀಟಿಗಳನ್ನು ಹಾಜರುಪಡಿಸಿರುತ್ತಾರೆ. ಗುರುತಿನ ಚೀಟಿಯಲ್ಲಿ ಅವರ ಹೆಸರು ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂದಿರುತ್ತದೆ. LCR ಪರಿಶೀಲಿಸಿದಾಗ ಅದರಲ್ಲಿನ ತಹಶೀಲ್ದಾರರ ಕಛೇರಿ ವರದಿಗಳಲ್ಲಿಯೂ ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂದು ಹೆಸರನ್ನು ಬದಲಾವಣೆ ಮಾಡಬಹುದೆಂದು ವರದಿಗಳಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

MR ಸಂಖ್ಯೆ 18/87-88 ನ್ನು ಭಾಗಶಃ ತಿದ್ದುಪಡಿಗೊಳಿಸಿ ಹತ್ಯಡ್ಕ ಗ್ರಾಮದ ಸ.ನಂ. 184/1 ವಿಸ್ತೀರ್ಣ 0.28 ಎಕ್ರೆ ಮತ್ತು 184/2 ವಿಸ್ತೀರ್ಣ 0.52 ಎಕ್ರೆ ಸ್ಥಳಗಳ ಪಹಣಿಯಲ್ಲಿನ ಮೇಲ್ಮನವಿದಾರರ ಹೆಸರನ್ನು ಮೋಹನ ಶೆಟ್ಟಿ ಬಿನ್ ತುಕ್ರಪ್ಪ ಶೆಟ್ಟಿ ಎಂಬುದಾಗಿ ತಿದ್ದುಪಡಿ ಮಾಡುವರೆ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ:25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಕಿಶೋರ್ ಕೊಳತ್ತಾಯ ,ಪುತ್ತೂರುಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ MR: 18/87-88 ಪುಟಸಂಖ್ಯೆ 1 ರಿಂದ 100 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.

& RRTCR 45/15-16